# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1048 (1278) |
| ಸದಸ್ಯರ ಹೆಸರು | : | ಶ್ರೀ. ಕೇಶವ ಪ್ರಸಾದ್ ಎಸ್ (ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | : | 19.12.2024 |
| ಉತ್ತರಿಸುವ ಸಚಿವರು | : | ಮಾನ್ಯ ಉಪ ಮುಖ್ಯ ಮಂತ್ರಿಗಳು |

| ಕ್ರ.ಸಂ | ಪ್ರಶ್ನೆಗಳು | ಉತ್ತರ |
|---|---|---|
| ಅ) | ಜಲಸಂಪನ್ಮೂಲ ಇಲಾಖೆಯ ಅಧೀನದಲ್ಲಿರುವ ನಿಗಮಗಳಲ್ಲಿ ವಿವಿಧ ಕಾಮಗಾರಿ ನಿರ್ವಹಿಸಿರುವ ಗುತ್ತಿಗೆದಾರರಿಗೆ ಪಾವತಿ ಮಾಡಬೇಕಾಗಿರುವ ಮೊತ್ತ ಎಷ್ಟು : (ವರ್ಷವಾರು ನಿಗಮವಾರು ವಿವರ ನೀಡುವುದು) | ಜಲಸಂಪನ್ಮೂಲ ಇಲಾಖೆಯ ಅಧೀನದಲ್ಲಿರುವ ನಿಗಮಗಳಲ್ಲಿ ವಿವಿಧ ಕಾಮಗಾರಿ ನಿರ್ವಹಿಸಿರುವ ಗುತ್ತಿಗೆದಾರರಿಗೆ ಪಾವತಿ ಮಾಡಲು ಪ್ರಸ್ತುತ ಬಾಕಿ ಇರುವ ಬಿಲ್ಲುಗಳ ನಿಗಮವಾರು ವಿವರ ಈ ಕೆಳಕಂಡಂತಿದೆ; (see table below) |

| ಕ್ರ. ಸಂ | ಪಾವತಿಗೆ ಬಾಕಿ ಇರುವ ಬಿಲ್ಲುಗಳ ಮೊತ್ತ (ರೂ. ಕೋಟಿಗಳಲ್ಲಿ) | | | |
|---|---|---|---|---|
| | ಕೃಭಾಜನಿನಿ (KBJNL) | ಕನೀನಿನಿ (KNNL) | ಕಾನೀನಿನಿ (CNNL) | ವಿಜನಿನಿ (VJNL) |
| 1 | 3664.31 | 4161.14 | 1887.23 | 2829.65 |

| ಕ್ರ.ಸಂ | ಪ್ರಶ್ನೆಗಳು | ಉತ್ತರ |
|---|---|---|
| ಆ) | ಕಳೆದ ಒಂದು ವರ್ಷದಿಂದ ಈವರೆವಿಗೆ ಎಷ್ಟು ಜನ ಗುತ್ತಿಗೆದಾರರಿಗೆ ಬಾಕಿ ಹಣ ನೀಡಲಾಗಿದೆ: ಪಾವತಿಯಾಗಿರುವ ಮೊತ್ತ ಎಷ್ಟು: (ಗುತ್ತಿಗೆದಾರರ ವಿವರವನ್ನು ಅವರು ಪೂರ್ಣಗೊಳಿಸಿರುವ ಕಾಮಗಾರಿಯೊಂದಿಗೆ ನೀಡುವುದು) | ಕಳೆದ ಒಂದು ವರ್ಷದಿಂದ ಈವರೆವಿಗೆ ಕೃಷ್ಣ ಭಾಗ್ಯ ಜಲ ನಿಗಮ, ಕರ್ನಾಟಕ ನೀರಾವರಿ ನಿಗಮ, ಕಾವೇರಿ ನೀರಾವರಿ ನಿಗಮ ಹಾಗೂ ವಿಶ್ವೇಶ್ವರಯ್ಯ ಜಲ ನಿಗಮಗಳಿಂದ ಗುತ್ತಿಗೆದಾರರಿಗೆ ಪಾವತಿ ಮಾಡಲಾಗಿರುವ ವಿವರಗಳನ್ನು ನಿಗಮವಾರು ಅನುಬಂಧ-1,2,3 & 4 ರಲ್ಲಿ ನೀಡಲಾಗಿದೆ. |
| ಇ) | ಸರ್ಕಾರದಿಂದ ಬರಬೇಕಿರುವ ಬಾಕಿ ಹಣ ನೀಡಿಲ್ಲ ಎಂಬ ಕಾರಣ ನೀಡಿ ಗುತ್ತಿಗೆದಾರರು ಆತ್ಮಹತ್ಯೆ ಯತ್ನ ನಡೆಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ (ವಿವರ ನೀಡುವುದು) | ಜಲಸಂಪನ್ಮೂಲ ಇಲಾಖೆಯಲ್ಲಿ ಅಂತಹ ಪ್ರಕರಣಗಳು ಯಾವುದು ಇರುವುದಿಲ್ಲ. |
| ಈ) | ಪ್ರಸಕ್ತ ಸಾಲಿನಲ್ಲಿ ಗುತ್ತಿಗೆದಾರರಿಗೆ ಪಾವತಿಸಲು ಮೀಸಲಿಟ್ಟಿರುವ ಹಣ ಎಷ್ಟು: ಗುತ್ತಿಗೆದಾರರಿಗೆ ಬಾಕಿ ಹಣ ಪಾವತಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು: ಯಾವ ಕಾಲಮಿತಿಯೊಳಗೆ ಬಾಕಿ ಹಣ ಪಾವತಿಸಲಾಗುವುದು? | 2024-25ನೇ ಸಾಲಿನಲ್ಲಿ ಒದಗಿಸಿದ ಆಯವ್ಯಯ ಅನುದಾನದಲ್ಲಿ ಬಂಡವಾಳವೆಚ್ಚ ಹಾಗೂ ಇತರೆ ಲೆಕ್ಕಶೀರ್ಷಿಕೆಯಡಿಯಲ್ಲಿ ಕಾಮಗಾರಿಗಳಿಗೆ ಒದಗಿಸಿರುವ ಅನುದಾನ ರೂ.9987.00ಕೋಟಿ ಇರುತ್ತದೆ. ಸದರಿ ಅನುದಾನವನ್ನು 1/12ನೇ ಆಧಾರದ ಮೇಲೆ ಪ್ರತಿ ಮಾಹೆ ಆಯಾ ಲೆಕ್ಕ ಶೀರ್ಷಿಕೆಗಳಡಿಯಲ್ಲಿ ಬಿಡುಗಡೆ ಮಾಡಲಾಗುತ್ತದೆ. ಸಂಬಂಧಿತ ಲೆಕ್ಕಶೀರ್ಷಿಕೆ ಅಡಿಯಲ್ಲಿ ಅನುದಾನ ಬಿಡುಗಡೆಯಾದಂತೆ ವೆಚ್ಚವು ಆಗುತ್ತದೆ. ಈಗಾಗಲೇ ಇಲಾಖೆಯಲ್ಲಿ ಹೆಚ್ಚಿನ ಸಂಖ್ಯೆಯ ಕಾಮಗಾರಿಗಳು ಹಾಗೂ ಭೂಸ್ವಾಧೀನ ಬಿಲ್ಲುಗಳ ಪಾವತಿಗೆ ಬಾಕಿ ಇರುವುದರಿಂದ ಕಾಯ್ದಿರಿಸಿದ ಎಲ್ಲಾ ಅನುದಾನವನ್ನು ಆಯಾ ಕಾಲಮಿತಿಯೊಳಗೆ ಪ್ರಸಕ್ತ ಸಾಲಿನಲ್ಲಿಯೇ ಸದುಪಯೋಗ/ಖರ್ಚು ಮಾಡಲಾಗುವುದು. |

**ಸಂಖ್ಯೆ: ಜಸಂಇ 153 ಎಂಎಲ್‌ಎ 2024**

**(ಡಿ.ಕೆ.ಶಿವಕುಮಾರ್)**
**ಉಪ ಮುಖ್ಯ ಮಂತ್ರಿ**